**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ, ಐವಾನ್-ಎ-ಶಾಹಿ ಬಡಾವಣೆ,ಕಲಬುರಗಿ**

ಸಿ7(5)ಯೋ.ಶಾ/ಕಲಿಕಾ ಮಟ್ಟ /ಸುಧಾ/ಕುರಿತು/21/2022-23 ದಿನಾಂಕ 22.04.2025

# ಸುತ್ತೋಲೆ

ವಿಷಯ: 2025-26ನೇ ಸಾಲಿನ ಶೈಕ್ಷಣಿಕ ಅವಧಿಯಲ್ಲಿ ಸೇವಾನಿರತ ಶಿಕ್ಷಕರ ತರಬೇತಿಗಳನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: ಸಿ7(2)ಯೋಜನೆ/ಡಯಟ್.ಸ್ಥಳಾಂತರ/04/2024-25 ದಿನಾಂಕ: 22.04.2025

**********

ಕಲಬುರಗಿ ವಿಭಾಗದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಈ ಸುತ್ತೋಲೆಯ ಮೂಲಕ ತಿಳಿಸುವುದೇನೆಂದರೆ, 2025-26ನೇ ಸಾಲಿನ ಶಾಲಾ ಕರ್ತವ್ಯದ ದಿನಗಳಲ್ಲಿ ಶಿಕ್ಷಕರ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಗಿನ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಉಲ್ಲೇಖಿತ ಸಭೆಯಲ್ಲಿ ಸ್ವತ: ಡಿ.ಎಸ್.ಇ.ಆರ್.ಟಿ.ಯ ನಿರ್ದೇಶಕರ ಸಮ್ಮುಖದಲ್ಲಿ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿ ನಿರ್ಣಯಿಸಲಾಗಿದೆ. 2025-26ನೇ ಸಾಲಿನಲ್ಲಿ ಒಟ್ಟು ಶಾಲಾ ಕರ್ತವ್ಯದ ದಿನಗಳು 242 ಆಗಿರುತ್ತವೆ. ಇದರಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಗೆ ಲಭ್ಯವಿರುವ ಕರ್ತವ್ಯದ ದಿನಗಳು 178 ಮಾತ್ರ. ಉಳಿದ ದಿನಗಳನ್ನು ಶೈಕ್ಷಣಿಕ ಚಟುವಟಿಕೆಗಳು, ಪರೀಕ್ಷೆಗಳು ಹಾಗೂ ಇತರೆ ಆಡಳಿತಾತ್ಮಕ ಕಾರ್ಯಗಳಿಗೆ ಮೀಸಲಿಡಲಾಗಿದೆ. ಕಲಬುರಗಿ ವಿಭಾಗದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಒಂದು ಶೈಕ್ಷಣಿಕ ಸಾಲಿನಲ್ಲಿ ನೀಡಲಾಗುವ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಗಿನ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸುವುದು:

1. ಶಿಕ್ಷಕ ವೃಂದದವರಿಗೆ 2025-26ನೇ ಸಾಲಿನಿಂದ ಅನ್ವಯವಾಗುವಂತೆ ಪ್ರತಿ ಶಿಕ್ಷಕನಿಗೆ ವರ್ಷಕ್ಕೆ ಗರಿಷ್ಠ 12 ದಿನಗಳವರೆಗೆ ಮಾತ್ರ ತರಬೇತಿಯನ್ನು ಆಯೋಜಿಸತಕ್ಕದ್ದು. ಇದರಲ್ಲಿ ಪ್ರತಿ ಶೈಕ್ಷಣಿಕ ಸಾಲಿನ ಮೊದಲನೇ ಅವಧಿಯಲ್ಲಿ ಗರಿಷ್ಠ 06 ದಿನಗಳು ಮತ್ತು ಎರಡನೇ ಶೈಕ್ಷಣಿಕ ಅವಧಿಯಲ್ಲಿ ಗರಿಷ್ಠ 06 ದಿನಗಳ ತರಬೇತಿಯನ್ನು ಮಾತ್ರ ಹಮ್ಮಿಕೊಳ್ಳತಕ್ಕದ್ದು.

2. ಮೊದಲನೇ ಶೈಕ್ಷಣಿಕ ಅವಧಿಯಲ್ಲಿ ಓರ್ವ ಶಿಕ್ಷಕನಿಗೆ ನಿಗದಿಪಡಿಸಿದ 06 ದಿನಗಳಿಗಿಂತ ಕಡಿಮೆ ದಿನಗಳು ತರಬೇತಿ ನಡೆದಿದ್ದರೂ ಸಹ, ಮೊದಲಾರ್ಧದಲ್ಲಿ ಉಳಿದಿರುವ ತರಬೇತಿ ದಿನಗಳನ್ನು ಎರಡನೇ ಶೈಕ್ಷಣಿಕ ಅವಧಿಗೆ ವರ್ಗಾಯಿಸಲು (Carry forward ಮಾಡಲು) ಬರುವುದಿಲ್ಲ. ಪ್ರತಿ ಅವಧಿಯ ತರಬೇತಿ ದಿನಗಳು ಆ ಅವಧಿಗೆ ಮಾತ್ರ ಸೀಮಿತವಾಗಿರುತ್ತವೆ.

3. ಒಂದು ವೇಳೆ ವರ್ಷಾರ್ಧದಲ್ಲಿ 06 ದಿನಗಳಿಗಿಂತ ಹಾಗೂ ವರ್ಷದಲ್ಲಿ 12 ದಿನಗಳಿಗಿಂತ ಹೆಚ್ಚಿಗೆ ತರಬೇತಿಗಾಗಿ ಓರ್ವ ಶಿಕ್ಷಕನನ್ನು ನಿಯೋಜಿಸಿದ್ದಲ್ಲಿ, ಅಂತಹ ನಿಯೋಜನೆಗೊಂಡ ಶಿಕ್ಷಕರು ಸದರಿ ತರಬೇತಿಯನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

4. ಶಿಕ್ಷಕರ ತರಬೇತಿ ನೀಡಲು ನಿಯೋಜಿಸಲಾಗುವ ಸಂಪನ್ಮೂಲ ವ್ಯಕ್ತಿಗಳು(MRP) ಒಂದು ವರ್ಷಕ್ಕೆ ಗರಿಷ್ಠ 20 ದಿನಗಳಿಗಿಂತ ಹೆಚ್ಚಿನ ಅವಧಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುವಂತೆ ಯಾವುದೇ ಸಂಸ್ಥೆಗಳು ನಿಯೋಜಿಸಿ ಆದೇಶಿಸುವಂತಿಲ್ಲ. ಮೊದಲನೇ ಅವಧಿಯಲ್ಲಿ ಗರಿಷ್ಠ 10 ದಿನಗಳು ಹಾಗೂ ಎರಡನೇ ಅವಧಿಯಲ್ಲಿ ಗರಿಷ್ಠ 10 ದಿನಗಳವರೆಗೆ ಮಾತ್ರ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸತಕ್ಕದ್ದು. ಮೊದಲಾರ್ಧದಲ್ಲಿ ಉಳಿದಿರುವ ತರಬೇತಿ ದಿನಗಳನ್ನು ಎರಡನೇ ಶೈಕ್ಷಣಿಕ ಅವಧಿಗೆ ವರ್ಗಾಯಿಸಲು (Carry forward ಮಾಡಲು) ಬರುವುದಿಲ್ಲ.

5. ಇದಕ್ಕಿಂತಲೂ ಹೆಚ್ಚಿನ ಅವಧಿಗೆ ಸಂಪನ್ಮೂಲ ಶಿಕ್ಷಕರನ್ನು ನಿಯೋಜಿಸಿದರೆ, ಅಂತಹ ನಿಯೋಜನೆಯನ್ನು ಸಂಪನ್ಮೂಲ ಶಿಕ್ಷಕರು (ಎಮ್.ಆರ್.ಪಿ) ತರಬೇತಿಯನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

6. 2025-26ನೇ ಸಾಲಿನಿಂದ ಅತಿಥಿ ಶಿಕ್ಷಕರನ್ನೂ ಡಯಟ್‌ನ ಎಲ್ಲಾ ತರಬೇತಿಗಳಿಗೆ ಪರಿಗಣಿಸುವುದು. ಅಲ್ಲದೇ ಅತಿಥಿ ಶಿಕ್ಷಕರ ತರಬೇತಿಗಳಿಗೂ ಸಹ ಈ ಎಲ್ಲಾ ಮಾನದಂಡಗಳು ಅನ್ವಯವಾಗುತ್ತವೆ. ಅತಿಥಿ ಶಿಕ್ಷಕರಿಗೆ ಕೇವಲ ಕಾರ್ಯನಿರತ ಊಟವನ್ನು ಮಾತ್ರ ನೀಡುವುದರಿಂದ, ಅವರನ್ನು ಕ್ಲಸ್ಟರ್ / ಬ್ಲಾಕ್ ಮಟ್ಟದ ತರಬೇತಿಗಳಿಗೆ ಮಾತ್ರ ಸೀಮಿತಗೊಳಿಸುವುದು ಸೂಕ್ತ.

7. **ವಾರ್ಷಿಕ ಶೈಕ್ಷಣಿಕ ಯೋಜನೆ ಪ್ರಕಟಣೆ ಕುರಿತಂತೆ ಕಲಬುರಗಿ ವಿಭಾಗದ ವ್ಯಾಪ್ತಿಯ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (DIETs) 2025-26ನೇ ಸಾಲಿನ ತಮ್ಮ ವಾರ್ಷಿಕ ಶೈಕ್ಷಣಿಕ ಯೋಜನೆಯನ್ನು ಈ ಸುತ್ತೋಲೆಯಂತೆ ದಿನಾಂಕ: 03-05-2025 ರೊಳಗಾಗಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು. ಸದರಿ ಯೋಜನೆಯಲ್ಲಿ ಈ ಸುತ್ತೋಲೆಯಲ್ಲಿ ತಿಳಿಸಿರುವ ಮಾನದಂಡಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಯಾವುದೇ ತರಬೇತಿಗಳನ್ನು ತಮ್ಮ ವಾರ್ಷಿಕ ಯೋಜನೆಯಲ್ಲಿ ಆಯೋಜಿಸದಿರಲು ಸೂಚಿಸಿದೆ.**

8. ಆಯಾ ಜಿಲ್ಲೆಯ ಉಪನಿರ್ದೇಶಕರು ಅಭಿವೃದ್ಧಿ(ಡಯಟ್)ರವರು, ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ಬೆಂಗಳುರು ರವರನ್ನು ಈ ಕೂಡಲೇ ಸಂಪರ್ಕಿಸಿ ತರಬೇತಿಯ ಅನುದಾನವನ್ನು ನಿಗದಿತ ಅವಧಿಯಲ್ಲಿ ಪಡೆದು ತರಬೇತಿಯನ್ನು ಆಯೋಜಿಸಲು ತಿಳಿಸಿದೆ. **ಯಾವುದೇ ಕಾರಣಕ್ಕೂ ಅನುದಾನದ ಕೊರತೆಯ ನೆಪಯೊಡ್ಡಿ 06+06 ರ ನಿಯಮವನ್ನು ಉಲ್ಲಂಘಿಸಲು ಅವಕಾಶವಿಲ್ಲ.**

9. ಈ ಮೇಲೆ ಚರ್ಚಿಸಲಾದ 06+06 ರ ನಿಯಮವು ಡಯಟ್ ಗಳು, NGO, ATI, CTE ಹಾಗೂ ಇತರೆ ಎಲ್ಲಾ ಸಂಸ್ಥೆಗಳು ನಡೆಸುವ ತರಬೇತಿಗಳನ್ನು ಒಳಗೊಂಡಂತೆ ಅನ್ವಯವಾಗುತ್ತವೆ. ಪ್ರತಿ ತಿಂಗಳು ಹಮ್ಮಿಕೊಳ್ಳುವ ಶಿಕ್ಷಕರ ಸಮಾಲೋಚನಾ ಸಭೆಗಳಿಗೆ ಸದರಿ ನಿಯಮವು ಅನ್ವಯಿಸುವುದಿಲ್ಲ.

10. ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಕರನ್ನು ತರಬೇತಿಗೆ ನಿಯೋಜಿಸುವಾಗ, ಪ್ರತಿಯೊಬ್ಬ ಶಿಕ್ಷಕರ ಆಯಾ ವರ್ಷಾರ್ಧದ ಹಿಂದಿನ ತರಬೇತಿಯ ವಿವರಗಳು ಮತ್ತು ಅವರ ವರ್ಷಾರ್ಧದ ತರಬೇತಿಯ ದಿನಗಳ ಕೋಟಾವನ್ನು ನಮೂದಿಸಿ ಶಿಕ್ಷಕರನ್ನು ತರಬೇತಿಗೆ ನಿಯೋಜಿಸುವುದು.

ಈ ಮೇಲೆ ನಮೂದಿಸಿರುವ ಎಲ್ಲಾ ಮಾನದಂಡಗಳನ್ನು ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಪಾಲಿಸಲು ತಿಳಿಸಲಾಗಿದೆ.

25.04.2025

ಡಾ. ಆಕಾಶ ಎಸ್ (ಭಾ.ಆ.ಸೇ)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು ರವರ ದಯಾಪರ ಮಾಹಿತಿಗಾಗಿ
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ರವರ ಮಾಹಿತಿಗಾಗಿ
3. ನಿರ್ದೇಶಕರು ಡಿಎಸ್ಇಆರ್ ಟಿ ಬೆಂಗಳುರು ರವರ ಮಾಹಿತಿಗಾಗಿ
4. ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), (ಅಭಿವೃದ್ಧಿ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
5. ಕಚೇರಿ ಪ್ರತಿ